**ಪ್ರಧಾನ ಸಿವಿಲ್ ನ್ಯಾಯಾಧೀಶರು ರವರ ನ್ಯಾಯಾಲಯ, ಕಡೂರು.**

**ಅಸಲು ದಾವಾ ಸಂಖ್ಯೆಃ 576/2024**

**ವಾದಿಯರು** : ಶ್ರೀ ಎಂ. ಮಹಂತೇಶ

**ವಿರುದ್ಧ**

**ಪ್ರತಿವಾದಿಯರು** : ಶ್ರೀಮತಿ ಭಾಗ್ಯಮ್ಮ ಮತ್ತು ಇತರರು

**ವಿವಾದಾಂಶಗಳು**

1. ವಾದಿ ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ದಾವಾ ಷೆಡ್ಯೂಲ್ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರಿಗೆ ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆಂದು ವಾದಿಯು ರುಜುವಾತುಪಡಿಸುತ್ತಾರೆಯೇ?

2. ದಿನಾಂಕಃ 20.09.2017 ರಂದು ದಾವಾ ಆಸ್ತಿಗಳನ್ನು ವಾದಿ ಮತ್ತು 2 ಹಾಗೂ 3 ನೇ ಪ್ರತಿವಾದಿಯರ ತಂದೆ ಹಾಗೂ 1 ನೇ ಪ್ರತಿವಾದಿಯ ಗಂಡ 2 ನೇ ಪ್ರತಿವಾದಿಗೆ ಬರೆದುಕೊಟ್ಟ ದಾನಪತ್ರವು ವಾದಿಯ ಹಕ್ಕಿಗೆ ಬಂದನಕಾರಿಯಾಗುವುದಿಲ್ಲವೆಂದು ವಾದಿಯು ರುಜುವಾತು ಪಡಿಸುತ್ತಾರೆಯೇ?

3. 2 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದ 10 ನೇ ಖಂಡಿಕೆಯಲ್ಲಿ ತಿಳಿಸಿರುವಂತೆ ಒಟ್ಟು ಕುಟುಂಬದ ಸ್ವತ್ತನ್ನು ವಾದಿಯು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ಈ ದಾವೆಯು ಊರ್ಜಿತವಲ್ಲವೆಂದು 2 ನೇ ಪ್ರತಿವಾದಿಯು ರುಜುವಾತುಪಡಿಸುತ್ತಾರೆಯೇ?

4. ಈ ದಾವೆಯು ಕಾಲಪರಿಮಿತಿ ಕಾಯ್ದೆಯಡಿಯಲ್ಲಿ ಪ್ರತಿಷೇಧಿತವಾಗಿರುತ್ತದೆಂದು 2 ನೇ ಪ್ರತಿವಾದಿಯು ರುಜುವಾತುಪಡಿಸುತ್ತಾರೆಯೇ?

5. ವಾದಿಯು ದಾವಾ ಸ್ವತ್ತುಗಳಲ್ಲಿ 1/4 ನೇ ಭಾಗದ ಕಾನೂನುಬದ್ದ ಹಿಸ್ಸೆ ಮತ್ತು ಪ್ರತ್ಯೇಕ ಸ್ವಾಧೀನವನ್ನು ಪಡೆಯಲು ಅರ್ಹರಾಗಿರುತ್ತಾರೆಯೇ?

6. ವಾದಿಯು ದಾವೆಯಲ್ಲಿ ಕೋರಿದಂತೆ ಪರಿಹಾರವನ್ನು ಪಡೆಯಲು ಅರ್ಹರಾಗಿರುತ್ತಾರೆಯೇ?

7. ಯಾವ ಆದೇಶ ಅಥವಾ ಡಿಕ್ರಿ?

**ದಿನಾಂಕಃ 21** ನೇ ಏಪ್ರಿಲ್ **2025**

ಸಹಿ.

(ಸವಿತರಾಣಿ ಹೆಚ್.ವಿ)
ಸಮವರ್ತಿ ಪ್ರಭಾರ ಪ್ರಧಾನ ಸಿವಿಲ್
ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಕಡೂರು.